**ಹಿರಿಯ ಶ್ರೇಣಿ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC.No.1910/2021**

**Cw-1 Pw-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಮುದ್ದುರಂಗಸ್ವಾಮಿ ತಂದೆ ಹನುಮಂತಪ್ಪ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಪಿಎಸ್ಐ |
| ವಾಸಸ್ಥಳ | ಃ | ಕುಷ್ಟಗಿ |
| ಪ್ರಮಾಣೀಕರಿಸಿದ ದಿನಾಂಕ | ಃ | 07-06-2024 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ನಾನು ದಿನಾಂಕ 14-06-2021 ರಿಂದ 12-08-2022 ರ ವೆರೆಗೆ ನಾನು ಜಾಲಹಳ್ಳಿ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿನಾಂಕ **26-10-2021** ರಂದು ನಾನು ಠಾಣೆಯಲ್ಲಿದ್ದಾಗ ಗಣಜಲಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಬಾತ್ಮಿ ಬಂದಿರುತ್ತದೆ. ಆ ಬಾತ್ಮಿಯ ಆಧಾರದ ಮೇರೆಗೆ ನಾನು ಜಾಲಹಳ್ಳಿಯ ತೇರಿನ ಪಟ್ಟಿಯ ಹತ್ತಿರ ಇದ್ದ ಚಾಸಾ-**2** ಮತ್ತು **3** ರವರನ್ನು ಕರೆಯಿಸಿ ದಾಳಿಗೆ ಸಹಕರಿಸಬೇಕು ಎಂದು ಕೇಳಿಕೊಂಡು ನಾನು, ಚಾಸಾ-**2** ರಿಂದ **6** ರವರು ನಮ್ಮ ಇಲಾಖಾ ವಾಹನದಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ, ನಾವು ಬೆಳಿಗ್ಗೆ **11-00** ಗಂಟೆಗೆ ಗಣಜಲಿ ಗ್ರಾಮಕ್ಕೆ ತಲುಪಿದ್ದು ಅಲ್ಲಿ ಮರೆಯಾಗಿ ನಿಂತು ನೋಡಿ ಮದ್ಯ ಮಾರಾಟ ಮಾಡುವುದನ್ನು ಖಚಿತ ಪಡಿಸಿಕೊಂಡು ಆರೋಪಿಯ ಮೇಲೆ ದಾಳಿ ಮಾಡಿರುತ್ತೇವೆ. ಆಗ ಅಲ್ಲಿದ್ದ ಜನ ಓಡಿ ಹೋಗಿದ್ದು ಮದ್ಯ ಮಾರಾಟ ಮಾಡುತ್ತಿದ್ದ ಆರೋಪಿಗಳು ನಮಗೆ ಸಿಕ್ಕಿರುತ್ತಾರೆ. ಅವರ ಹೆಸರುಗಳನ್ನು ವಿಚಾರಿಸಲಾಗಿ ಅವರು ತಮ್ಮ ಹೆಸರುಗಳನ್ನು ಹನುಮಂತ್ರಾಯ ಮತ್ತು ಸಂಗಮೇಶ ಎಂದು ಹೇಳಿರುತ್ತಾರೆ. ಆರೋಪಿತರನ್ನು ತಪಾಸಣೆ ಮಾಡಲಾಗಿ ಅವರ ಹತ್ತಿರ **180** ಎಂ.ಎಲ್ ನ **35** ಓ.ಸಿ ವಿಸ್ಕಿ ಪೌಚಗಳು ಕಂಬಂದಿರುತ್ತವೆ. ನಾವು ಆರೋಪಿತರಿಗೆ ಪರವಾನಿಗೆ ಕುರಿತು ವಿಚಾರಿಸಲಾಗಿ ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ಪಂಚರ ಸಮಕ್ಷಮ ಮದ್ಯದ ಮುದ್ದೆಮಾಲನ್ನು ಜಪ್ತಿಪಡಿಸಿಕೊಂಡು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ಶೀಲ್ ಮಾಡಿರುತ್ತೇನೆ. ನಂತರ ಆರೋಪಿತರು ಹಾಗೂ ಮುದ್ದೆಮಾಲಿನೊಂದಿಗೆ ಠಾಣೆಗೆ ವಾಪಸ್ಸಾಗಿ ಪ್ರಕರಣವನ್ನು ದಾಖಲಿಸಿರುತ್ತೇನೆ. ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಬೆಳಿಗ್ಗೆ **11-15** ರಿಂದ **12-15** ಗಂಟೆಯವರೆಗೆ ಮಾಡಿರುತ್ತೇನೆ. ಸಾಕ್ಷಿಯು ನಿಪಿ-**1** ರಲ್ಲಿಯ ತಮ್ಮ ಸಹಿಯನ್ನು ನೋಡಿ

ಗುರುತಿಸಿದ್ದು ಅದನ್ನು ನಿಪಿ**-1(**ಬಿ**)** ಎಂದು ಗುರುತಿಸಲಾಯಿತು**.** ಸಾಕ್ಷಿ ಜ್ಞಾಪನಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ**-2** ಎಂದು**,** ಸಾಕ್ಷಿಯ ಸಹಿಯನ್ನು ನಿಪಿ**-2(**ಎ**)** ಎಂದು ಗುರುತಿಸಲಾಯಿತು**.** ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮದ್ಯದ ಪೌಚಗಳುಳ್ಳ ಒಂದು ಡಬ್ಬಿಯನ್ನು ನೋಡಿ ಗುರುತಿಸಿದ್ದು ಅದನ್ನು **MO-1** ಎಂದು ಗುರುತಿಸಲಾಯಿತು**.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎಮ್.ಆರ್ ವಕೀಲರಿಂದ.**

ಗಣಜಲಿ ಗ್ರಾಮದ ಪ್ರವೇಶ ಆಗುವಾಗ ಮೊದಲೇ ಘಟನಾ ಸ್ಥಳ ಬರುತ್ತದೆ. ಮುಂಡರಗಿ ಗ್ರಾಮ ಆದ ನಂತರ ಒಂದು ಹಳ್ಳ ಇದ್ದು ಹಳ್ಳ ದಾಟಿದ ನಂತರ ಗಣಜಲಿ ಗ್ರಾಮ ಬರುತ್ತದೆ ಎಂದರೆ ನಿಜ. ಘಟನಾ ಸ್ಥಳ ಒಂದು ಜೋಪಡಿ ಹೊಟೇಲ್ ಇತ್ತು. ಆ ಜೋಪಡಿ 1 ನೇ ಆರೋಪಿಗೆ ಸಂಬಂಧಿಸಿರುತ್ತದೆ. ಘಟನಾ ಸ್ಥಳ ಜೋಪಡಿ ಎಂದು ನಿಪಿ-1 ರಲ್ಲಿ ಬರೆದಿಲ್ಲ ಆದರೆ ಹೊಟೇಲ್ ಎಂದು ಬರೆದಿರುತ್ತೆವೆ. 180 ಎಂ.ಎಲ್ ನ ಓ.ಸಿ ವಿಸ್ಕಿ ಪೌಚ್‌ಗಳು ಇದ್ದವು. ಆರೋಪಿತರಿಂದ ಯಾವುದೇ ಹಣವನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಮದ್ಯದ ಪೌಚ್‌ಗಳ ತಯಾರಿಸಿದ ದಿನಾಂಕ ಹೇಳಲು ಬರುವುದಿಲ್ಲ. ಮದ್ಯದ ಪೌಚಗಳನ್ನು ಯಾವ ಲೈಸನ್ಸ ಅಂಗಡಿಯಿಂದ ಖರೀದಿ ಮಾಡಲಾಗಿದೆ ಎಂದು ನಿಪಿ-1 ರಲ್ಲಿ ಹೇಳಿಲ್ಲ. ಮದ್ಯದ 35 ಪೌಚಗಳು ಸರಕಾರಿ ಮದ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ನಿಜ. ಪಂಚನಾಮೆ ಮುಗಿಸಿಕೊಂಡು ಜಾಲಹಳ್ಳಿಗೆ ನಾವು ಮಧ್ಯಾಹ್ನ 1-00 ಗಂಟೆಗೆ ತಲುಪಿರುತ್ತೇವೆ. ಗಣಜಲಿ ಗ್ರಾಮ ಯಾವ ಬೀಟ್‌ನಲ್ಲಿ ಬರುತ್ತದೆ ಗೊತ್ತಿಲ್ಲ. ಗಣಜಲಿ ಗ್ರಾಮಕ್ಕೆ ಆ ದಿನ ಯಾರು ಬೀಟ್ ಪಿ.ಸಿ ಇದ್ದರು ನೆನಪಿಲ್ಲ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ 10 ರಿಂದ 15 ಇದ್ದರು. ನಾವು ಹೋದಾಗ ಅಲ್ಲಿದ್ದ ಜನರು ಓಡಿ ಹೋಗಿದ್ದರಿಂದ ಅವರನ್ನು ವಿಚಾರಿಸಿರುವುದಿಲ್ಲ. ನಾವು ಹೋದಾಗ ಆರೋಪಿತರು ಯಾವ ದಿಕ್ಕಿಗೆ ಮುಖ ಮಾಡಿ ಕುಳಿತಿದ್ದರು ನೆನಪಿಲ್ಲ. ನಾವು ಪೂರ್ವದ ಕಡೆಯಿಂದ ಹೋಗಿದ್ದು ಆರೋಪಿತರು ಪಶ್ಚಿಮ ದಿಕ್ಕಿಗೆ ಇದ್ದರು. ಗಣಜಲಿಯ ಮುಖ್ಯ ರಸ್ತೆ ಉತ್ತರ-ದಕ್ಷಿಣವಾಗಿ ಇರುತ್ತದೆ ಎಂದರೆ ಸರಿಯಲ್ಲ. ಗಣಜಲಿ ಮುಖ್ಯ ರಸ್ತೆಯ ಪಶ್ಚಿಮಕ್ಕೆ ಗಣಜಲಿ ಗ್ರಾಮ ಇದೆ ಎಂದರೆ ನಿಜ. ದಿನಾಂಕ 26-10-2021 ರಂದು ನಮಗೆ ಬಾತ್ಮಿ ಬಂದಿದ್ದು ನಾವು ಸ್ಥಳಕ್ಕೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಪಂಚರ ಸಮಕ್ಷಮ ಪಂಚನಾಮೆ ಮಾಡಿ ಮುದ್ದೆಮಾಲನ್ನು ಜಪ್ತಿಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಅಂಕಿ-ಅಂಶಕ್ಕಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಬೇಕು ಎಂದು ಕೇಳಿಕೊಂಡಿದ್ದರಿಂದ ಅಳವಡಿಸಿಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.